

ನೆನೆದು ಕೂತತ್ತಲೆ ಎದೆ ಕಂಪಿಸಿದಂತಾಗಿ ಓಡುತ್ತಿರುವ ಬಸ್ಸಿಗೆ ಹಾರುವ ಗುಣ ಬರಬಾರದೆ ಎಂದು ಸಾವಿತ್ರಿಗೆ ಎನಿಸದಿರದು.

ಇಂಥ ಸಂದಿಗ್ಧದಲ್ಲಿ ಬದುಕು ದೂಡುತ್ತಿರುವ ಸಾವಿತ್ರಿ ಇದಕ್ಕೆ ತಾತ್ಕಾಲಿಕ ಪರಿಹಾರವೆಂಬಂತೆ ತನ್ನ ದೂರದ ಸಂಬಂಧದ ಹುಡುಗಿಯೊಬ್ಬಳನ್ನ ಅವಳು ಎಸ್ಸೆಸ್ಸೆಲ್ಸಿಯಲ್ಲಿ ಫೇಲಾದ ನಂತರ ಟ್ಯೂಷನ್ ನೆಪದಲ್ಲಿ ತಂದು ಮನೆಗಿಟ್ಟುಕೊಂಡಿದ್ದಳು. ಸಾವಿತ್ರಿಯ ಕೆಲಸಗಳಲ್ಲಿ ನೆರವಾಗುತ್ತಿದ್ದುದರಿಂದ ಅವಳಿದ್ದಷ್ಟೂ ದಿನ ಒಂದಿಷ್ಟು ನಿರಾಳತೆ ಇತ್ತಾದರೂ ಆ ನಿರಾಳತೆ ಬಹಳ ದಿನ ಉಳಿಯಲಿಲ್ಲ. ಸಂಬಂಧಿಕರ ಮಗಳು ಅವಳ ಕೆಲಸ ಮುಗಿದು ಊರಿಗೆ ವಾಪಸ್ ಹೋಗಿ ಬಿಟ್ಟಳು. ಮತ್ತೆ ಸಾವಿತ್ರಿಗೆ ತಪ್ಪದ ಗೋಳು.

ಇಂಥ ಪರಿಸ್ಥಿತಿಯಿಂದ ಪಾರಾಗಿ ಒಂಚೂರು ಉಸಿರುಯ್ದುಕೊಳ್ಳಲು ಗಂಡ ಹೆಂಡತಿ ಒಂದು ನಿರ್ಧಾರಕ್ಕೆ ಬಂದರು. ಅದು ಪ್ರತಿ ನಿತ್ಯ ಬೆಳಗ್ಗೆ ಸಾವಿತ್ರಿ ಎದ್ದು ಆಚೆ ಬರುವಷ್ಟರಲ್ಲಿ ನಾಕಾರು ಮನೆ ಕೆಲಸ ಮುಗಿಸಿ ಕೈಯಲ್ಲೊಂದು ಬ್ಯಾಗ್ ಹಿಡಿದುಕೊಂಡು ಇನ್ನೊಂದನ್ನು ಬೀಸಿಕೊಂಡು ಬರಬರನೆ ಮನೆಗೆ ಹಿಂತಿರುಗುತ್ತಿದ್ದ ಮನೆಗೆಲಸದ ಶಿವಮ್ಮನನ್ನು ಕಂಡ ನಂತರ. ಈ ಹಿಂದೆಯೂ ಅದೇ ಹೆಂಗಸನ್ನು ಇದೇ ದಾರಿಯಲ್ಲಿ ನೋಡಿದ್ದಳಾದರೂ ಆಕೆ ತರಹೇವಾರಿ ಬಣ್ಣದ ಸೀರೆಗಳನ್ನು ಉಡುತ್ತಿದ್ದುದರಿಂದ ಪಕ್ಕದ ಮನೆ ಸರಸಮ್ಮನವರು ಖುದ್ದಾಗಿ, 'ಅವಳೇ ಮನೆಗೆಲಸದವಳು' ಎಂದು ಹೇಳುವ ತನಕ ಸಾವಿತ್ರಿಗೆ ತಿಳಿದಿರಲಿಲ್ಲ. ಶಿವಮ್ಮನ ನಾಜೂಕನ್ನು ಕಂಡು